Dr. Shivakumar's
AKKA IAS ACADEMY

ಕ್ಯಾಸನೂರು ಅರಣ್ಯ ರೋಗ (ಮಂಗನ ಕಾಯಿಲೆ)

Posted at: 26/11/2024

ಕ್ಯಾಸನೂರು ಅರಣ್ಯ ರೋಗ (ಮಂಗನ ಕಾಯಿಲೆ)

- ಚಿಕ್ಕಮಗಳೂರು ಜಿಲ್ಲೆಯಲ್ಲಿ ಇತ್ತೀಚೆಗೆ ಕ್ಯಾಸನೂರು ಅರಣ್ಯ ರೋಗ (ಮಂಗನ ಕಾಯಿಲೆ - ಕೆಎಫ್ಡಿ) ಪ್ರಕರಣಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದು ಜಿಲ್ಲಾ ಆರೋಗ್ಯ ಅಧಿಕಾರಿಗಳು ಕಟ್ಟೆಚ್ಚರ ವಹಿಸಿದ್ದಾರೆ .

ಕ್ಯಾಸನೂರು ಅರಣ್ಯ ರೋಗ ದ ಬಗ್ಗೆ ತಿಳಿಯಿರಿ :

- ಚಿಗಟ, ನೊಣಗಳಿಂದ ಪ್ರಾಥಮಿಕವಾಗಿ ಹರಡುವ ಇದೊಂದು ವೈರಾಣು ಸೋಂಕು.
- ನಮ್ಮ ರಾಜ್ಯದ ಚಿಕ್ಕಮಗಳೂರು, ಶಿವಮೊಗ್ಗ , ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಾಗಿ , ಮಹಾರಾಷ್ಟ್ರ , ಕೇರಳ ಮತ್ತು ಗೋವಾ ರಾಜ್ಯಗಳಲ್ಲಿ ಮಂಗನ ಕಾಯಿಲೆಯ ಪ್ರಕರಣಗಳು ವರದಿಯಾಗಿವೆ. ಹಿರಿಯರು ಮತ್ತು ಕಿರಿಯರೆನ್ನದೇ ಎಲ್ಲರನ್ನೂ ಇದು ಬಾಧಿಸಬಹುದು .
- ಮೊದಲ ಬಾರಿಗೆ ಇದು 1957ರಲ್ಲಿ ಶಿವಮೊಗ್ಗ ಜಿಲ್ಲೆಯ ಕ್ಯಾಸನೂರಿನ ಕಾಡಿನಲ್ಲಿ ಒಂದು ಕೋತಿಯಲ್ಲಿ ಈ ವೈರಸ್ ಕಂಡುಬಂದಿತು. ಆದ್ದರಿಂದಲೇ ಇದನ್ನು ಕ್ಯಾಸನೂರು ಅರಣ್ಯ ಕಾಯಿಲೆ ಎಂದು ಕರೆಯಲಾಗುತ್ತದೆ .
- ಫ್ಲಾವಿವಿರಿಡೆ ಎಂಬ ಹೆಸರಿನ ವೈರಸ್ನಿಂದ ಈ ಕಾಯಿಲೆ ಹರಡುತ್ತದೆ . ಈ ವೈರಸ್ ಇತರ ಪ್ರಾಣಿಗಳಿಗೆ/ಸಣ್ಣ ಪುಟ್ಟ ಜೀವಿಗಳಿಗೆ ತಗುಲಿ ಅವು ಮನುಷ್ಯರಿಗೆ ಕಚ್ಚಿದಾಗ ಮಂಗನ ಕಾಯಿಲೆ ಹರಡುತ್ತದೆ .
- ಮನುಷ್ಯರಿಗೆ ಸಾಮಾನ್ಯವಾಗಿ ಕಾಡಿಗೆ ಹೋದಾಗ ಚಿಗಟ ಅಥವಾ ಉಣ್ಣೆಗಳಿಂದ ಅಥವಾ ಸತ್ತ ಮಂಗನ ಸಂಪರ್ಕದಿಂದ ಈ ಕಾಯಿಲೆ ಹರಡುತ್ತದೆ .
- ಮನುಷ್ಯರಿಂದ ಮನುಷ್ಯರಿಗೆ ಈ ಕಾಯಿಲೆ ಹರಡಿರುವುದು ಇನ್ನೂ ದೃಢಪಟ್ಟಿಲ್ಲ .
- ಈ ಸಾಂಕ್ರಾಮಿಕ ವು ಸಾಮಾನ್ಯವಾಗಿ ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಪ್ರಾರಂಭವಾಗುತ್ತದೆ. ಜನವರಿಯಿಂದ ಏಪ್ರಿಲ್ವರೆಗೆ ಈ ರೋಗದ ಹರಡುವಿಕೆ ವ್ಯಾಪಕವಾಗಿರುತ್ತದೆ . ಇದಾದ ನಂತರ ಮೇ ಮತ್ತು ಜೂನ್ ಸಮಯಕ್ಕೆ ಕಡಿಮೆಯಾಗುತ್ತಾ ಹೋಗುತ್ತದೆ.
- ಈ ಕಾಯಿಲೆಯ ಮೊದಲ ಲಕ್ಷಣವೇ ಸೋಂಕು ತಗುಲಿದ ಒಂದು ವಾರದ ನಂತರ ಕಾಣಿಸಿಕೊಳ್ಳುವ ಜ್ವರ . ಒಂದು ಬಾರಿ ಈ ವೈರಸ್ ದೇಹವನ್ನು ಸೇರಿದರೆ ಸತತ 10 ರಿಂದ 12 ದಿನಗಳವರೆಗೆ ಜ್ವರ ಕಾಡುತ್ತದೆ . ಚಳಿ, ಜ್ವರ , ತಲೆನೋವು, ತೀವ್ರ ಸ್ನಾಯು ನೋವು, ವಾಂತಿ , ಜೀರ್ಣಾಂಗವ್ಯೂಹದ ಸಮಸ್ಯೆಗಳು ಕಾಣಸಿಕೊಳ್ಳುತ್ತವೆ . ನಂತರ ಕಡಿಮೆ ರಕ್ತದೊತ್ತಡ , ರಕ್ತ ಕಣಗಳ (ಪ್ಲೇಟ್ಲೆಟ್ಗಳು , ಕೆಂಪು ರಕ್ತ ಕಣಗಳು , ಬಿಳಿ ರಕ್ತ ಕಣಗಳು) ಸಂಖ್ಯೆ ಕಡಿಮೆಯಾಗುವುದು, ತೀವ್ರ ತಲೆನೋವು, ಮಾನಸಿಕ ತೊಂದರೆಗಳು, ನಡುಕ ಮತ್ತು ದೃಷ್ಟಿ ಕೊರತೆಗಳು ಕಾಣಿಸಿಕೊಳ್ಳುತ್ತವೆ .
- ಈ ಕಾಯಿಲೆಗೆ ಎಂದು ಪ್ರತ್ಯೇಕವಾದ ಚಿಕಿತ್ಸಾ ವ್ಯವಸ್ಥೆ ಇಲ್ಲ .